ಓ ಎಸ್ ನಂ.86/2024
ಡಿ.ಡಬ್ಲ್ಯೂ-1 ಸುಮಿತ್ರಾ ಗಂಡ ದಾನಯ್ಯ ಹಿರೆಮಠ

**(ಇಂದು ದಿನಾಂಕಃ 16-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಪಿ ಬಿ ಪಿ ವಕೀಲರಿಂದ.

ನನ್ನ ಮಾವ ಶಾಂತಯ್ಯರವರ ತಂದೆಯ ಹೆಸರು ಶಿವಲಿಂಗಯ್ಯ ಎಂದು ಇರುತ್ತದೆ. ಶಿವಲಿಂಗಯ್ಯರವರು ಯಾವಾಗ ಮೃತರಾಗಿರತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನನ್ನ ಮದುವೆ ಆಗುವ ಮೊದಲು ಅವರು ಮೃತರಾಗಿರುತ್ತಾರೆ ಎನ್ನುತ್ತಾರೆ. ನನ್ನ ಮದುವೆ ಆಗಿ ಸುಮಾರು ೨೦ ವರ್ಷ ಆಗಿರುತ್ತದೆ. ಸದರಿ ಶಿವಲಿಂಗಯ್ಯರವರು ಮೃತರಾಗಿ ಸುಮಾರು ೩೫ ವರ್ಷಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಶಾಂತಯ್ಯರವರು ಮೃತರಾಗಿ ಸುಮಾರು ೧೬ ವರ್ಷಗಳಾಗಿರುತ್ತವೆ. ಶಾಂತಯ್ಯರವರು ಮೃತರಾದ ನಂತರ ದಾವಾ ಜಮೀನು ನನ್ನ ಗಂಡನ ಹೆಸರಿನಲ್ಲಿ ಆಗಿರುತ್ತದೆ. ನನ್ನ ಗಂಡ ದಾನಯ್ಯರವರು ಮೃತರಾಗಿ ಸುಮಾರು ೬ ವರ್ಷಗಳಾಗಿರುತ್ತವೆ. ನನ್ನ ಗಂಡ ದಾನಯ್ಯರವರು ಮೃತರಾದ ನಂತರ ದಾವಾ ಜಮೀನಿನ ಪಹಣಿ ನನ್ನ ಹೆಸರಿನಲ್ಲಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ.

೨. ಶಿವಲಿಂಗಯ್ಯರವರಿಂದ ನನ್ನ ಮಾವ ಶಾಂತಯ್ಯರವರಿಗೆ ದಾವಾ ಜಮೀನು ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಜಮೀನು ಹಿರಿಯರಿಂದ ಬಂದಿದೆ ಎಂದರೆ ಸರಿ. ಸಾಕ್ಷಿಯು ನನ್ನ ೫ ಜನ ಮಾವಂದಿರಿಗೆ ಮತ್ತು ಅವರ ೨ ಜನ ಸಹೋದರಿಯರಿಗೆ ಕೂಡಾ ಪಾಲು ಬೇಕು ಎಂದು ಹೇಳಿರುತ್ತಾರೆ ಎನ್ನುತ್ತಾರೆ. ನನ್ನ ಮಾವನಿಂದ ನನ್ನ ಗಂಡನ ಹೆಸರಿನಲ್ಲಿ ದಾವಾ ಜಮೀನು ಆಗುವಾಗ ನನ್ನ ಮಾವನ ಸಹೋದರ ಮತ್ತು ಸಹೋದರಿಯರು ತಕರಾರು ಮಾಡಿರುವುದಿಲ್ಲ. ಸಾಕ್ಷಿಯು ತಂದೆಯ ಆಸ್ತಿ ಮಗನಿಗೆ

ಆಗಿರುತ್ತದೆ ಮುಂದೆ ಮಾಡಿಕೊಳ್ಳಬೇಕೆಂದು ಬಿಟ್ಟಿರುತ್ತಾರೆ ಎನ್ನುತ್ತಾರೆ. ನನ್ನ ಗಂಡನಿಂದ ನನ್ನ ಹೆಸರಿನಲ್ಲಿ ದಾವಾ ಜಮೀನು ಆಗುವಾಗ ಕೂಡಾ ನನ್ನ ಮಾವನ ಸಹೋದರಿಯರು ಮತ್ತು ಸಹೋದರರು ಯಾವುದೆ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಾವನ ಸಹೋದರನಾದ ಮಲ್ಲಯ್ಯ ಸುಮಾರು ೩ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ಮಾವನ ಸಹೋದರನಾದ ಶಶಿಕಾಂತ ಸುಮಾರು ೭ ವರ್ಷಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ಮಾವನ ಸಹೋದರನಾದ ಈರತಯ್ಯರವರು ೬ ತಿಂಗಳ ಹಿಂದೆ ಮೃತರಾಗಿರುತ್ತಾರೆ. ನನ್ನ ಮಾವನ ಸಹೋದರನಾದ ಶಿವಾನಂದರವರು ಜೀವಿತಾ ಇರುತ್ತಾರೆ.

೩. ನನ್ನ ಹೆಸರಿನಲ್ಲಿ ದಾವಾ ಜಮೀನು ಆಗುವಾಗ ನನ್ನ ಮಾವನ ಸಹೋದರರು ತಕರಾರು ಮಾಡಿದ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮಾವನ ತಂದೆ ಶಿವಲಿಂಗಯ್ಯರವರು ಗಳಿಸಿದ ಆಸ್ತಿ ಸರ್ವೆ ನಂಬರ ೩೨/೩ ಮಾತ್ರ ಇರುತ್ತದೆ. ನನ್ನ ೫ ಜನ ಮಾವಂದಿರು ೧೨ ಎಕರೆ ೩೦ ಗುಂಟೆ ಮತ್ತು ಇನ್ನೊಂದು ೧೨ ಎಕರೆ ೩೦ ಗುಂಟೆ ಆಸ್ತಿಗಳನ್ನು ಗಳಿಸಿರುತ್ತಾರೆ. ಆ ಕುರಿತು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ೧೯೮೧ ರಲ್ಲಿ ಶಾಂತಯ್ಯ, ಈರಯ್ಯ ಮತ್ತು ಶಿವಾನಂದರವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗದ ಪ್ರಕಾರ ದಾವಾ ಜಮೀನು ನನ್ನ ಮಾವ ಶಾಂತಯ್ಯರವರಿಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಉಳಿದ ಮಾವಂದಿರು ಕೂಡಾ ಪಾಲು ಕೇಳುತ್ತಿದ್ದಾರೆ ಏನು ಮಾಡುವುದು ಎನ್ನುತ್ತಾರೆ.

೪. ಶಿವಲಿಂಗಯ್ಯರವರು ನನ್ನ ಮಾವ ಶಂತಯ್ಯ, ಈರತಯ್ಯ ಮತ್ತು ಶಿವಾನಂದರವರಿಗೆ ಈಗ ನನಗೆ ತೋರಿಸಿದ ದಾಖಲೆಯಂತೆ ಪಾಲು ಮಾಡಿಕೊಟ್ಟ ಮುಟೇಷನ್ ೧೯೮೫ ರಲ್ಲಿ ಆಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಗುರುತಿಸುವ ಸಲುವಾಗಿ ನಿಪಿ-೨೯ ಎಂದು

ಗುರುತಿಸಲಾಯಿತು. ಶಿವಲಿಂಗಯ್ಯರವರು ಮಾಡಿಕೊಟ್ಟಂತೆ ದಾವಾ ಆಸ್ತಿ ನಮ್ಮ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಸರಿ. ನನ್ನ ಮಾವ ದಾವಾ ಆಸ್ತಿಯ ಸ್ವಾಧಿನದಲ್ಲಿದ್ದು, ಅವರ ನಂತರ ನಾವು ಈಗ ದಾವಾ ಜಮೀನು ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ದಾವಾ ಜಮೀನು ಹಿರಿಯರಿಂದ ಬಂದ ಆಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ನಮಗೆ ಬಹಳ ಅನ್ಯಾಯ ಆಗಿರುತ್ತದೆ ನಮಗೆ ಸಾಲ ಬಹಳ ಮಾಡಿ ಇಟ್ಟಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿಯಲ್ಲಿ ನನ್ನ ಮಾವನ ಸಹೋದರರಿಗೆ ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ ಪಾಲು ನೀಡಬಾರದು ಎಂಬ ಉದ್ದೇಶದಿಂದ ನಾನು ನನ್ನಮಾವಂದಿರ ಮಾತು ಕೇಳಿ ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ನಿಪಿ-೨೯ ರಲ್ಲಿ ತೋರಿಸಿದ ಸರ್ವೆ ನಂಬರ ೬೩/೧ ಸಕ್ಕರೆ ಕಾರ್ಖಾನೆಗೆ ಸ್ವಾಧೀನವಾಗಿರುತ್ತದೆ. ನಿಪಿ-೨೯ ರಲ್ಲಿ ತೋರಿಸಿದ ಸರ್ವೆ ನಂಬರ ೧೧೮/೨ ರಲ್ಲಿ ಎಲ್ಲರಿಗೆ ಪಾಲು ಬಂದಿರುತ್ತದೆಯಲ್ಲಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಕ್ಕರೆ ಕಾರ್ಖಾನೆಗೆ ಹೋದ ಜಮೀನಿನ ಹಣವನ್ನು ಎಲ್ಲರೂ ಸೇರಿ ಹಂಚಿಕೊಂಡಿರುತ್ತಾರೆ. ದಾವಾ ಜಮೀನಿನಲ್ಲಿ ೫ ಜನ ಸಾಗುವಳಿ ಮಾಡುತ್ತಾರೆ.

ಮುಂದುವರೆದ ಪಾಟೀ ಸವಾಲು : ಸಕ್ಕರೆ ಕಾರ್ಖಾನೆಗೆ ಜಮೀನು ಸ್ವಾಧೀನ ಆದಾಗ ನನ್ನ ಮಾವ ಶಾಂತಯ್ಯ ಇದ್ದರು ಎಂದರೆ ಸರಿ. ಅವರ ಕೈಯಿಂದಲೆ ಸ್ವಾಧೀನ ಆಗಿರುತ್ತದೆ ಎಂದರೆ ಸರಿ. ಸರ್ವೆ ನಂಬರ ೧೧೮ ರಲ್ಲಿ ಕೂಡಾ ನಾವು ಎಲ್ಲರು ಸಾಗುವಳಿ ಮಾಡುತ್ತೇವೆ. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಜಮೀನು ೧೨ ಎಕರೆ ೩೦ ಗುಂಟೆ ಇರುತ್ತದೆ. ಅದರಲ್ಲಿ ನಮಗೆ ಇನ್ನೂ ಪಾಲು ಬಂದಿರುವುದಿಲ್ಲ. ಸುಮಾರು ೩೦

ರಿಂದ ೪೦ ವರ್ಷಗಳಿಂದ ಸದರಿ ಜಮೀನಿನ ಪಹಣಿ ಶಶಿಕಾಂತ ಮತ್ತು ಅವರ ಹೆಂಡತಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನನಗೆ ನಿಪಿ-೨೯ ರಂತೆ ಸರ್ವೆ ನಂಬರ ೬೩ ರಲ್ಲಿ ಮಲ್ಲಯ್ಯರವರಿಗೆ ಮತ್ತು ಶಾಂತಯ್ಯ, ಈರತಯ್ಯ ಮತ್ತು ಶಿವಾನಂದರವರಿಗೆ ಸರ್ವೆನಂಬರ ೩೨ ರಲ್ಲಿ ಮತ್ತು ಸರ್ವೆ ನಂಬರ ೧೧೮ ರಲ್ಲಿ ಶಶಿಕಾಂತರವರಿಗೆ ಶಿವಲಿಂಗಯ್ಯರವರು ಪಾಲು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಅದರಂತೆ ಅವರವರ ಹೆಂಡತಿ-ಮಕ್ಕಳು ಸದರಿ ಜಮೀನುಗಳ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.